# ವಿಶ್ವರೂಪಿ ಗಣೇಶ ದರ್ಶನ

ರಬಕವಿಯ ನಿವೃತ್ತ ಚಿತ್ರಕಲಾ ಶಿಕ್ಷಕ ಮಹಾದೇವ ಕವಿಶೆಟ್ಟಿ ಗಣೇಶನ ಒಂದು ನೂರು ಭಂಗಿಗಳ ಚಿತ್ರಗಳನ್ನು ಜಲವರ್ಣದಲ್ಲಿ ಚಿತ್ರಿಸಿದ್ದಾರೆ. ಬರ್ಮಾ, ಥಾಯ್ಲೆಂಡ್, ಇಂಡೋನೇಷಿಯಾ, ಮಲೇಷಿಯಾ, ವಿಯಟ್ನಾಂ, ಶ್ರೀಲಂಕಾ, ಕಾಂಬೋಡಿಯಾ, ನೇಪಾಳ ಹೀಗೆ ಅನೇಕ ದೇಶಗಳಲ್ಲಿ ಗಣೇಶನನ್ನು ಈಗಲೂ ಭಕ್ತಿಯಿಂದ ಪೂಜಿಸುತ್ತಾರೆ. ಆಯಾ ದೇಶಗಳಲ್ಲಿ ಪೂಜಿಸುವ ಗಣೇಶನ ವಿಶ್ವರೂಪವನ್ನು ಈ ಕಲಾವಿದ ತಮ್ಮ ಕುಂಚದಿಂದ ಬಣ್ಣಗಳಲ್ಲಿ ಸೆರೆ ಹಿಡಿದಿದ್ದಾರೆ. ಚಿತ್ರಗಳಿಗೆ ಜಲವರ್ಣವನ್ನೇ ಬಳಸಿದ್ದಾರೆ. ಇತ್ತೀಚೆಗೆ ರಬಕವಿಯ ಬ್ರಹ್ಮಾನಂದ ಶಿವಯೋಗಿಗಳ 150 ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಈ ಚಿತ್ರಗಳು ಇಲ್ಲಿಯ ಆಶ್ರಮದಲ್ಲಿ ಪ್ರದರ್ಶನಗೊಂಡಿವೆ.

**-ಯಶವಂತ ವಾಜಂತ್ರಿ, ರಬಕವಿ**






# ಎಲ್ಲೆಲ್ಲೂ ಜಾಹೀರಾತು

ಇದೇನು ಮೂತ್ರಿಯ ಪರಿಕರದಲ್ಲೂ ಜಾಹೀರಾತೇ ಎಂದು ಹುಬ್ಬೇರಿಸಬೇಡಿ. ನಿಜಕ್ಕೂ ಇದು ಜಾಹೀರಾತಿನ ಒಂದು ಮಾದರಿ. ಇತ್ತೀಚೆಗೆ ದುಬೈಗೆ ಹೋದಾಗ ಕಣ್ಣಿಗೆ ಬಿತ್ತು. ನಾವಿಳಿದುಕೊಂಡಿದ್ದ ಹೊಟೇಲಿನಲ್ಲಿ ಈ ಜಾಹೀರಾತಿನ ಪರಿ ಕಂಡು ಬೆರಗಾದೆ. ವಾಷ್‌ರೂಮ್ ಬಳಸುವ ಸಮಯದಲ್ಲಿ ಕಣ್ಣಿನ ಕೇಂದ್ರಿಕೃತ ದೃಷ್ಟಿಯ ಕೋನವನ್ನು ಅಭ್ಯಸಿಸಿ ಜಾಹೀರಾತನ್ನು ಪರಿಣಾಮಕಾರಿಯಾಗಿ ಬಿಂಬಿಸಲು ಅಳವಡಿಸಲಾದ ಚಿಕ್ಕ ಟಿ.ವಿಯಲ್ಲಿ ಪ್ರಸಾರ ಮಾಡಲಾಗುತ್ತದೆ. ಆದರೂ ಆಯ್ಕೆ ಮಾಡಿದ ಸ್ಥಳದ ಬಗ್ಗೆ ಸ್ವಲ್ಪ ಮುಜುಗರ ಎನಿಸಿತು.

**-ವೆಂಕಟೇಶ ಮುದಗಲ್, ಕಲಬುರಗಿ**

# ಪಾಲ

ನದಿ, ಹೊಳೆ, ತೋಡು ಇತ್ಯಾದಿಗಳನ್ನು ಕಾಲ್ನಡಿಗೆಯಲ್ಲಿ ದಾಟಲು ತೂಗು ಸೇತುವೆ, ಕಾಲುಸಂಕಗಳು ಇರುವಂತೆ, ಮರದ ಕಾಲು ಸಂಕಗಳೂ ಇವೆ. ಇಂತಹ ಸಂಕಗಳಿಗೆ ಪಾಲ ಎಂಬ ಹೆಸರಿರುವಂತೆ, 'ಪಾಲ' ದಿಂದದಲೇ ಹುಟ್ಟಿಕೊಂಡ ಊರ ಹೆಸರುಗಳೂ ಇವೆ. ಉದಾ:- ಜೋಡುಪಾಲ, ಎಡಪಾಲ, ಕೊಡಪಾಲ ಇತ್ಯಾದಿ. ಇದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹಳ್ಳಿಯೊಂದರಲ್ಲಿ ತೋಡಿಗೆ ಅಳವಡಿಸಿದ ಮರದ ಪಾಲ. ಈ ಪಾಲ ಅಡಿಕೆ ಮರ, ಬಿದಿರು ಮತ್ತು ಕಾಡುಬಳ್ಳಿಗಳಿಂದ ರಚಿಸಲ್ಪಟ್ಟಿದೆ.

**-ಜೈಮಿನಿ ಉಬರಡ್ಕ, ಸುಳ್ಯ**

